(ಅ)	ಹಾಸನ ಜಿಲ್ಲೆಯಲ್ಲಿ ವಿಧಾನಸಭಾ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2019-20ನೇ ಸಾಲಿನಲ್ಲಿ ನಿಗದಿಪಡಿಸಿರುವ ರೂ.2.00 ಕೋಟಿಗಳ ಅನುದಾನದಲ್ಲಿ ಸರ್ಕಾರ ಈವರೆವಿಗೂ ಕೇವಲ ರೂ.50.00 ಲಕ್ಷಗಳನ್ನು ಬಿಡುಗಡೆಗೊಳಿಸಿರುವುದು ನಿಜವೇ;(ಸಂಪೂರ್ಣ ಮಾಹಿತಿ ನೀಡುವುದು).	ವಿಧಾನಸಭಾ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2019-20 ನೇ ಸಾಲಿನಲ್ಲಿ ನಿಗದಿಪಡಿಸಿರುವ ರೂ2.00 ಕೋಟಿಗಳನ್ನು ಎರಡು ಕಂತುಗಳಲ್ಲಿ ಅನುದಾನ ಬಿಡುಗಡೆಗೊಳಿಸಲಾಗಿದೆ. 1. ಮೊದಲನೇ ಕಂತು ತಲಾ ರೂ.50.00 ಲಕ್ಷದಂತೆ ಒಟ್ಟು ರೂ.4.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. 2. ಎರಡನೇ ಕಂತು ಎಸಿಪಿ/ಟಿಎಸ್ ಪಿ ಯಡಿಯಲ್ಲಿ ತಲಾ ರೂ.11.53 ಲಕ್ಷದಂತೆ ಒಟ್ಟು ರೂ.92.22 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.. 3. ಸರ್ಕಾರದ ಆದೇಶದ ಸಂಖ್ಯೆ ಯೋವಿವಿ 2017 ದಿನಾಂಕ-12.12.2017 ರನ್ವಯ ಶಿಕ್ಷಣ, ಆರೋಗ್ಯ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಈ ಮೂರು ಇಲಾಖೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಪಾವತಿಸುವ ಸಂಬಂಧ ಹಾಗೂ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿರುವವರಿಗೆ ಮತ್ತು ಅನುದಾನಕ್ಕೆ ಬೇಡಿಕೆ ಕೋರಿದ ಜಿಲ್ಲೆಗಳಿಗೆ ದಿನಾಂಕ 17.02.2020 ರಂದು ಹಾಸನ ಜಿಲ್ಲೆಗೆ ರೂ.10.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ.
(ಆ)	ಹಾಸನ ಜಿಲ್ಲೆಯ ವಿಧಾನಸಭಾ ಸದಸ್ಯರು ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2019-20ನೇ ಸಾಲಿನಲ್ಲಿ ನಿಗದಿಪಡಿಸಿರುವ ರೂ.2.00 ಕೋಟಿಗಳ ಅನುದಾನದಲ್ಲಿ ಬಿಡುಗಡೆಗೆ ಬಾಕಿ ಇರುವ ರೂ.150.00 ಲಕ್ಷಗಳ ಅನುದಾನವನ್ನು ಆರ್ಥಿಕ ಇಲಾಖೆಯು ಯಾವ ಕಾಲಮಿತಿಯೊಳಗೆ ಬಿಡುಗಡೆಗೊಳಿಸಲಾಗುವುದು;(ಸಂಪೂರ್ಣ ಮಾಹಿತಿ ನೀಡಿವುದು)	ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ದಿನಾಂಕ-01.04.2019ಕ್ಕೆ ರೂ.12.41 ಕೋಟಿಗಳ ಅನುದಾನವಿರುವುದರಿಂದ ಸದರಿ ಅನುದಾನದಲ್ಲಿ ಶಾಸಕರುಗಳು ರೂ.2.00 ಕೋಟಿಗಳ ಮಿತಿಗೊಳಪಟ್ಟು 2019-20ನೇ ಸಾಲಿನಲ್ಲಿ ಸಲ್ಲಿಸುವ ಕ್ರಿಯಾ ಯೋಜನೆಗಳಿಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಕಾಯದೆ ಅನುಮೋದನೆ ನೀಡಿ ಅನುದಾನ ಬಿಡುಗಡೆಗೊಳಿಸಲು ನಿರ್ದೇಶನ ನೀಡಲಾಗಿರುತ್ತದೆ.

(ಇ)	ವಿಧಾನಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2019-20ನೇ ಸಾಲಿನಲ್ಲಿ ನಿಗದಿಪಡಿಸಿರುವ ರೂ.2.00 ಕೋಟಿಗಳ ಅನುದಾನದ ಬಿಡುಗಡೆ ವಿಳಂಬವಾಗಲು ಕಾರಣವೇನು;(ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ದಿನಾಂಕ 01.04.2019ಕ್ಕೆ ರೂ.12.41 ಕೋಟಿಗಳ ಅನುದಾನ ಇದ್ದರೂ 2019-20ನೇ ಸಾಲಿನಲ್ಲಿ 2 ಕಂತುಗಳಲ್ಲಿ ರೂ.4.92 ಕೋಟಿಗಳನ್ನು ಹಾಗೂ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಭೂತ ಕಾರ್ಯಕ್ರಮಗಳಿಗೆ ಪಾವತಿಸುವ ಸಂಬಂಧ ರೂ.10.00 ಕೋಟಿಗಳು ಬಿಡುಗಡೆಗೊಳಿಸಲಾಗಿದೆ. ಫೆಬ್ರುವರಿ-2020ರ ಅಂತ್ಯಕ್ಕೆ ರೂ 10.42 ಕೋಟಿಗಳು ವೆಚ್ಚವಾಗಿದ್ದು, ಈ ವೆಚ್ಚವನ್ನು ಕಳೆದು ಉಳಿಯುವ ಹಣ ರೂ.16.91 ಕೋಟಿಗಳು ಇರುತ್ತದೆ. ಆದ್ದರಿಂದ ರೂ.2.00 ಕೋಟಿಗಳ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಉಳಿತಾಯ ಖಾತೆಯಲ್ಲಿರುವ ಅನುದಾನದಲ್ಲಿ ಪಾವತಿಸಿ ವೆಚ್ಚ ಭರಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.
(ಈ)	ಸದರಿ ಜಿಲ್ಲೆಯಲ್ಲಿ ವಿಧಾನಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2019-20ನೇ ಸಾಲಿನಲ್ಲಿ ನಿಗದಿಪಡಿಸಿರುವ ರೂ.2.00 ಕೋಟಿಗಳ ಅನುದಾನದ ಬಿಡುಗಡೆ ವಿಳಂಬವಾಗಿರುವುದರಿಂದ ಜಿಲ್ಲಾಡಳಿತವು ವಿಧಾನಸಭಾ ಸದಸ್ಯರ ಅನುದಾನದಲ್ಲಿ ನೀಡಿರುವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡದೆ, ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಆಡಳಿತಾತ್ಮಕ ನೀಡಲು ಜಿಲ್ಲಾಡಳಿತಕ್ಕೆ ಸರ್ಕಾರದಿಂದ ನಿರ್ದೇಶನ ನೀಡಲಾಗುವುದೇ; (ಸಂಪೂರ್ಣ ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ ರೂ.2.00 ಕೋಟಿಗಳ ಕಾಮಗಾರಿಗಳ ಅನುಷ್ಠಾನಕ್ಕೆ ತೊಂದರೆಯಾಗದಂತೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುಷ್ಠಾನಗೊಳಿಸಲು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿರುತ್ತದೆ. ಅನುದಾನ ಅಗತ್ಯವಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆಯೂ ಸಹ ಸೂಚಿಸಲಾಗಿರುತ್ತದೆ.

ಪಿಡಿಎಸ್ / 29 /ಕೆವಲ್‌ಎಸ್/2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಜಸಂಇ 67 ಎಲ್ಎಕ್ಯೂ - 20

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 23 03 - 20

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್ತು~~,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ರಾಮಸ್ವಾಮಿ. ಎ. ಟಿ. ರವರ ಚುಕ್ಕೆ ಗುರುತಿನ / ~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ: 2971 ಕ್ಕೆ ಉತ್ತರಗಳನ್ನು ಸಲ್ಲಿಸುವ ಬಗ್ಗೆ.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ರಾಮಸ್ವಾಮಿ. ಎ. ಟಿ. ರವರ ಚುಕ್ಕೆ ಗುರುತಿನ / ~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ: 2971 ಕ್ಕೆ ಜಲಸಂಪನ್ಮೂಲ ಇಲಾಖೆಯು ನೀಡಿರುವ ಉತ್ತರದ 350 ಪ್ರತಿಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

ಉಮಾದೇವಿ. ಬಿ
ಶಾಖಾಧಿಕಾರಿ (ಪ್ರ)
ಜಲಸಂಪನ್ಮೂಲ ಇಲಾಖೆ (ಎಂಎಂಐ-2)

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿಗಳು(ಎಂಎಂಐ-2), ಜಲಸಂಪನ್ಮೂಲ ಇಲಾಖೆ.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2971
2. ಸದಸ್ಯರ ಹೆಸರು : ಶ್ರೀ ರಾಮಸ್ವಾಮಿ ಎ. ಟಿ.
3. ಉತ್ತರಿಸಬೇಕಾದ ದಿನಾಂಕ : 24–03–2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹಿಂದಿನ ಸರ್ಕಾರದ ಅವಧಿಯಲ್ಲಿ ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೂಕು ನಗರ್ತಿ ಏತ ನೀರಾವರಿ ಯೋಜನೆಯ ಪುನಶ್ಚೇತನ ಕಾಮಗಾರಿ ಕೈಗೊಳ್ಳಲು ರೂ.495.00 ಲಕ್ಷಗಳ ಕ್ರಿಯಾ ಯೋಜನೆಗೆ ಕಾವೇರಿ ನೀರಾವರಿ ನಿಗಮದಿಂದ ಅನುಮೋದನೆ ನೀಡಲಾಗಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)	ನಗರ್ತಿ ಏತ ನೀರಾವರಿ ಯೋಜನೆಯ ಪುನಶ್ಚೇತನ ಕಾಮಗಾರಿಯು 2019–20ನೇ ಸಾಲಿನ ಕಾಮಗಾರಿಗಳ ಕಾರ್ಯಕ್ರಮ ಪಟ್ಟಿಯಲ್ಲಿ ರೂ.495.00 ಲಕ್ಷಗಳಿಗೆ ಸೇರ್ಪಡೆಯಾಗಿದೆ. ದಿನಾಂಕ:20–09–2019 ರಂದು ನಡೆದ ಕಾವೇರಿ ನೀರಾವರಿ ನಿಗಮ ಮಂಡಳಿಯ 70ನೇ ಸಭೆಯ ನಿರ್ಣಯದಂತೆ ಅನುದಾನದ ಲಭ್ಯತೆ ಇಲ್ಲದಿರುವ ಕಾರಣ, ಸದರಿ ಕಾಮಗಾರಿಯನ್ನು ಸೇರಿದಂತೆ ಇನ್ನು ಅನುಷ್ಠಾನಗೊಳ್ಳದೆ ವಿವಿಧ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳನ್ನು ಆರ್ಥಿಕ ಶಿಸ್ತನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಸದ್ಯಕ್ಕೆ ಕೈಬಿಡಲಾಗಿದೆ.
ಆ	ಸದರಿ ಯೋಜನೆಯ ಪುನಶ್ಚೇತನ ಕಾಮಗಾರಿಗೆ ಅನುಮೋದನೆ ನೀಡದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಕಾಮಗಾರಿಗೆ ಅನುಮೋದನೆ ನೀಡಿ ಪೂರ್ಣಗೊಳಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಗಮದ ಕಾರ್ಯಭಾರ ಅಧಿಕವಾಗಿರುವುದರಿಂದ, ಸದರಿ ಕಾಮಗಾರಿಗಳನ್ನು 2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಅನುದಾನದ ಲಭ್ಯತೆಗನುಸಾರವಾಗಿ ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು.
ಇ	ಇದರಿ ಏತ ನೀರಾವರಿ ಯೋಜನೆಯ ಪುನಶ್ಚೇತನ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿರುತ್ತದೆ ? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ:ಜಸಂಇ 67 ಎಸ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 45 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:23/03/2020.

06
S/ard
24/03/2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಬೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ:-- ಕರ್ನಾಟಕ ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀಕೌಜಲಗಿ ಮಹಾಂತೇಶ ಶಿವಾನಂದ್ (ಬೈಲಯಹೊಂಗಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2983ಕ್ಕೆ ಉತ್ತರ ಒದಗಿಸುವ ಬಗ್ಗೆ.

***

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ್ (ಬೈಲಯಹೊಂಗಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2983ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. .

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2983
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ದಿನಾಂಕ : 24.03.2020
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	2019–20ನೇ ಸಾಲಿನ ಆಯವ್ಯಯದಲ್ಲಿ ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತಕ್ಷೇತ್ರದ ಸಮಗ್ರ ನೀರಾವರಿ ಯೋಜನೆಗೆ ಎಷ್ಟು ಹಣವನ್ನು ಮೀಸಲಿಡಲಾಗಿತ್ತು;	2019–20ನೇ ಸಾಲಿನ ಆಯವ್ಯಯದಲ್ಲಿ "80 ಕೋಟಿ ರೂ. ವೆಚ್ಚದಲ್ಲಿ ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿ ನೀರಾವರಿ ಯೋಜನೆ" ಎಂದು ಘೋಷಿಸಲಾಗಿರುತ್ತದೆ.
ಆ)	ಸದರಿ ಮತಕ್ಷೇತ್ರದಲ್ಲಿ ಸುಮಾರು 30 ಹಳ್ಳಿಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆ ಹೊಂದಿದ್ದು ನಿಜವಲ್ಲವೇ;	ಹೌದು
ಇ)	ಈ ಭಾಗದ ರೈತರಿಗೆ ಅನುಕೂಲವಾಗಲೆಂದು ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸಿದ್ದು ನಿಜವಲ್ಲವೇ;	ಹೌದು, ಈ ಭಾಗದ ರೈತರಿಗೆ ಅನುಕೂಲವಾಗಲೆಂದು ಮಲಪ್ರಭಾ ಜಲಾಶಯದ ಅಂಚಿನಗುಂಟ **(Fore Shore)** ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮಲ್ಲೂರು–ಮಾಟೊಳ್ಳಿ, ಹೊಸೂರ–ವಕ್ಕುಂದ, ದೇವಲಾಪೂರ, ಜಾಲಿಕೊಪ್ಪ, ಕೆಂಗಾನೂರು, ಬೂದಿಹಾಳ ಹಾಗೂ ಏಣಗಿ–ಹಿಟ್ಟಣಗಿ 7 ಏತ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ.
ಈ)	ಹಾಗಿದ್ದಲ್ಲಿ, ಅವು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ ಆ ಭಾಗದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ 7 ಏತ ನೀರಾವರಿ ಯೋಜನೆಗಳಲ್ಲಿ 2 ಏತ ನೀರಾವರಿ ಯೋಜನೆಗಳಾದ ಜಾಲಿಕೊಪ್ಪ ಹಾಗೂ ದೇವಲಾಪೂರ ಏತ ನೀರಾವರಿ ಯೋಜನೆಗಳು ದುರಸ್ತಿಯಲ್ಲಿವೆ.
ಉ)	ಹಾಗಿದ್ದಲ್ಲಿ, ಆ ಎಲ್ಲಾ ಏತ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?	ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ರೂ.80.00 ಕೋಟಿ ಮೊತ್ತದಲ್ಲಿ ಬೈಲಹೊಂಗಲ ಮತಕ್ಷೇತ್ರದಲ್ಲಿ ಬರುವ ಜಾಲಿಕೊಪ್ಪ, ಬೂದಿಹಾಳ ಹಾಗೂ ಕೆಂಗಾನೂರ ಏತ ನೀರಾವರಿ ಯೋಜನೆಗಳನ್ನು ನವೀಕರಿಸಲು ಹಾಗೂ ಬೈಲವಾಡ, ದೇವಲಾಪೂರ ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದ್ದು, ಪರಿಶೀಲನೆಯಲ್ಲಿರುತ್ತದೆ. ಮುಂದುವರೆದು, ಪ್ರಸ್ತುತ ದುರಸ್ತಿಯಲ್ಲಿರುವ ಜಾಲಿಕೊಪ್ಪ ಹಾಗೂ ದೇವಲಾಪೂರ ಏತ ನೀರಾವರಿ ಯೋಜನೆಗಳ ದುರಸ್ತಿಗಾಗಿ ನಿಗಮದಲ್ಲಿ ಪ್ರಸ್ತಾವನೆಗಳನ್ನು ಅಂತಿಮಗೊಳಿಸಲಾಗುತ್ತಿದೆ.

ಸಂಖ್ಯೆ: ಜಸಂಇ 45 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 51 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:23/03/2020.

07
Stard
24/03/2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2141 ಕ್ಕೆ ಉತ್ತರ ಒದಗಿಸುವ ಬಗ್ಗೆ.

***

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2141ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. .

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2141
ಸದಸ್ಯರ ಹೆಸರು : ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ)
ಉತ್ತರಿಸುವ ದಿನಾಂಕ : 24.03.2020
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಿಂದ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಎಷ್ಟು ಹಣ ಒದಗಿಸಲಾಗಿದೆ; ಇದರಲ್ಲಿ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಳಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಕಳೆದ ಕಳೆದ 3 ವರ್ಷಗಳಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಬಿಡುಗಡೆ ಮಾಡಿದ ಅನುದಾನದ ವಿವರಗಳು ಈ ಕೆಳಗಿನಂತಿವೆ: (ರೂ.ಕೋಟಿಗಳಲ್ಲಿ) ವರ್ಷ / ಒಟ್ಟು: 2016-17 — 4472.06; 2017-18 — 4922.80; 2018-19 — 4385.11. ನಿಗಮದಡಿ ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ರೂ.6939.25 ಕೋಟಿ ವೆಚ್ಚ ಮಾಡಲಾಗಿರುತ್ತದೆ. ನಿಗಮದಡಿ ಕಳೆದ 3 ವರ್ಷಗಳಲ್ಲಿ ಕೈಗೊಂಡಿರುವ ಯೋಜನಾ ಕಾಮಗಾರಿಗಳ ವೆಚ್ಚದ ವಿವರಗಳನ್ನು ಅನುಬಂಧ-1ಅ ಮತ್ತು 1ಬ ರಲ್ಲಿ ನೀಡಲಾಗಿದೆ.
ಆ)	ಸದರಿ ಯೋಜನೆಯಡಿ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಅವುಗಳು ಯಾವ ಹಂತದಲ್ಲಿವೆ? (ಸಂಪೂರ್ಣ ವಿವರ ನೀಡುವುದು)	ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಸಂಖ್ಯೆ: ಜಸಂಇ 51 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

ಅನುಬಂಧ-1 ಅ

Sl.No	ಕಾಮಗಾರಿ	PROJECT COMPONENTS	2016-17	2017-18
I	ಕೃಮೇ.ಯೋ ಮುಖ್ಯ ಕಾಮಗಾರಿಗಳು	Main works of UKP		
1	ಆಲಮಟ್ಟಿ ಅಣೆಕಟ್ಟು ಮತ್ತು ಅಣೆಕಟ್ಟಿನ ಇತರೆ ಕಾಮಗಾರಿಗಳು (ಉದ್ಯಾನವನ ಕಾಮಗಾರಿಗಳು, ಹಾಗೂ ಅರಣ್ಯೀಕರಣ ಒಳಗೊಂಡಂತೆ)	Almatti Dam & Allied works(inludes land scape,dcf etc	11.58	27.06
2	ನಾರಾಯಣಪುರ ಅಣೆಕಟ್ಟು ಮತ್ತು ಅಣೆಕಟ್ಟಿನ ಇತರೆ ಕಾಮಗಾರಿಗಳು	Narayanapur Dam & allied works	3.27	2.46
3	ನಾರಾಯಣಪುರ ಎಡದಂಡೆ ಕಾಲುವೆ	Narayanapur Left Bank Canal	1.55	0.76
4	ಎಸ್‌ಬಿ ಕಾಲುವೆ (ಬೋನಾಳ್ ಏತ ನೀರಾವರಿ ಯೋಜನೆ ಒಳಗೊಂಡಂತೆ)	SB Canal(includes Bonal LIS)	9.41	1.03
5	ಇಂಡಿ ಶಾಖಾ ಕಾಲುವೆ (2011-12 ಇಟಗಾ ಸಂಗಮ ವೆಚ್ಚ 4.50 ಕೋಟಿ ಒಳಗೊಂಡಂತೆ)	Indi Branch Canal (2011-12-itaga sangam cost 4.50crs)	0.47	10.00
6	ಜೇವರ್ಗಿ ಶಾಖಾ ಕಾಲುವೆ	Jewargi Branch Canal	6.37	0.09
7	ಮುದಬಾಳ್ ಶಾಖಾ ಕಾಲುವೆ	Mudbal Branch Canal	2.83	0.02
8	ನಾರಾಯಣಪುರ ಬಲದಂಡೆ ಕಾಲುವೆ	Narayanapur Right Bank Canal	4.75	6.58
9	ಇಂಡಿ ಏತ ನೀರಾವರಿ ಯೋಜನೆ	Indi Lift Irrigation Scheme.	3.11	5.09
10	ಆಲಮಟ್ಟಿ ಎಡದಂಡೆ ಕಾಲುವೆ	Almatti Left Bank Canal	10.92	6.22
11	ಆಲಮಟ್ಟಿ ಬಲದಂಡೆ ಕಾಲುವೆ	Almatti Right Bank Canal	1.45	0.11
12	ಮುಳವಾಡ ಏತ ನೀರಾವರಿ ಯೋಜನೆ (ರೂ.1.00 ಕೋಟಿ ಹೆಚ್ಚುವರಿ ಮೊತ್ತ ಒಳಗೊಂಡಂತೆ)	Mulwad Lift Irrigation (addl Rs.1 crores)	7.93	15.83
13	ರಾಂಪುರ ಏತ ನೀರಾವರಿ ಯೋಜನೆ (ರೂ 3.25 ಕೋಟಿ ಹೆಚ್ಚುವರಿ ಮೊತ್ತ ಒಳಗೊಂಡಂತೆ)	Rampur Lift Irrigation Scheme (Rs.3.25 crs addl)	2.76	5.16
14	ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ	R&R WORKS	22.66	95.69
15	ಬಾಪಅಪ್ರಾ	BTDA (addl Rs.50crs)	116.19	97.28
16	ಭೂಸ್ವಾಧೀನ	LAQ	144.36	119.13
17	ಆಡಳಿತ & ವೇತನ ವೆಚ್ಚಗಳು	Establishment and Salary expenses	105.33	101.73
18	ಇತರೆ	Others	199.70	124.40
	ಹೆಚ್ಚುವರಿ ಯೋಜನೆಗಳು			
19	ಹೆಚ್ಚುವರಿ ಯೋಜನೆಗಳಿಗೆ ಭೂಸ್ವಾಧೀನ ಮತ್ತು ಮುಳುಗಡೆ	Land Acquisition&Subme- for Additional proj	30.08	0.00
20	ಎಆರ್‌ಬಿಸಿ ಕಾಲುವೆಯ ಮೇಲೆ ಸೌರಫಲಕ ಅಳವಡಿಕೆ	ARBC SOLAR PANEL ON CANAL	0.00	0.00
21	ಎನ್‌ಆರ್‌ಬಿಸಿ ವಿತರಣಾ ಕಾಲುವೆ 9ಎ (ವಡವಟ್ಟಿ, ಅರಕೇರ ಒಳಗೊಂಡಂತೆ)	NRBC DY 9A(Includes Wadavatti,Arkera)	22.70	14.15
22	ಕಾಡಾ ಹೊಲಗಾಲುವೆ ಕಾಮಗಾರಿಗಳು	CADA FIC works (programe 2013-14)	17.29	13.55
23	ನಬಾರ್ಡ	NABARD	61.65	4.19
24	ರಾಂಥಾಳ್ ಏತ ನೀರಾವರಿ ಯೋಜನೆ	Ramthal Lift Irrigation Scheme	7.46	4.05
25	ರಾಂಥಾಳ್ ಏತ ನೀರಾವರಿ ಯೋಜನೆ (ಹನಿ ನೀರಾವರಿ ಯೋಜನೆ)	Ramthal Lift Irrigation Scheme DRIP irrigation	84.67	4.74
26	ಕಲ್ಲೂರು ಬಿ ಬ್ಯಾರೇಜ್	Kallur B barrage	0.00	0.00
27	ಘಟ್ಟರಗಾ ಬ್ಯಾರೇಜ್	Ghattarga Barrage	0.05	0.00
28	ಸನ್ನತಿ ಪರಿಷ್ಕೃತ ಯೋಜನೆ	Sonthi Modified	14.93	16.59
29	ಯಾದಗಿರಿ	Yadigiri	0.10	5.50
30	ಜೋಳದಡಗಿ ಗುಡೂರು ಬ್ಯಾರೇಜ್	Joladadagi Gudur	0.78	6.07
31	ಸೊನ್ನ ಏತ ನೀರಾವರಿ ಯೋಜನೆ	Sonna LIS	0.08	0.12
32	ರೊಳ್ಳಿ ಮನ್ನಿಕೇರಿ ಏತ ನೀರಾವರಿ ಯೋಜನೆ (2010)	Rolli mannikeri LIS (2010)	0.16	1.44

33	ಗೂಗಲ್ ಬ್ಯಾರೇಜ್ (2003)	Gugal barrage (2003)	0.00	2.15
34	ತೆಗ್ಗಿ – ಸಿದ್ದಾಪುರ ಏತ ನೀರಾವರಿ ಯೋಜನೆ	Tegi Siddhapur LIS. (2010)	0.86	0.89
35	ತಿಮ್ಮಾಪುರ ಏತ ನೀರಾವರಿ ಯೋಜನೆ	Thimmapur LIS (2006)	5.64	.35
36	ರಾಜನ್ ಕೊಳ್ಳೂರು ಏತ ನೀರಾವರಿ ಯೋಜನೆ	Rajan kolur LIS	0.25	1.01
37	ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕೆರೆ ತುಂಬುವ ಯೋಜನೆ	Filling of tanks in Bijapur,Bagalkot (2009)	21.75	0.00
38	ಅಣಚಿ ಏತ ನೀರಾವರಿ ಯೋಜನೆ	Anachi LIS-Filling up of tank	9.02	4.40
39	ಭುಯ್ಯಾರ್ ಏತ ನೀರಾವರಿ ಯೋಜನೆ	BHUYYAR	27.32	34.24
40	ಬಿಜಾಪುರ ಜಿಲ್ಲೆಯ ಮಮದಾಪುರ, ಸರವಾದ್, ಬಬಲೇಶ್ವರ, ಭೂತನಾಳ್, ಬೇಗಂ ತಲಾಬ್ ಮತ್ತು ತಿಡಗುಂಡಿಯ ಕೆರೆ ತುಂಬುವ ಯೋಜನೆ	FILLING UP OF TANKS MAMADAPUR, SARWAD,BABALESHWAR,BHUTAN,BEGUMTALAB,TIDAGUNDI IN BIJAPUR	55.84	25.59
41	ಚಡ್‌ಚಣ್ ಏತ ನೀರಾವರಿ ಯೋಜನೆ	CHADCHAN LIS	0.03	52.38
42	ಚಿಕ್ಕ ಪಡಸಲಗಿ ಬ್ಯಾರೇಜ್ (ಕುಡಿಯುವ ನೀರಿನ ಯೋಜನೆ)	Chikka padasalagi barrage drinking water	1.96	0.00
43	ಜೀರಗಿಹಾಳ್ ಬ್ಯಾರೇಜ್ (42.77+14.38) (2006)	Jirgihall (42.77+14.38) (2006)	0.09	0.18
44	ಮಾಣೀಕೇಶ್ವರ ಬ್ಯಾರೇಜ್ (42.60+11.84) (2006)	Manikeshwara (42.60+11.84) (2006)	0.26	1.32
45	ಹಾಲಹಳ್ಳಿ ಬ್ಯಾರೇಜ್ (59.13+26.69) (2006)	Halahalli (59.13+26.69) (2006)	0.42	1.28
46	ಚಂದಾಪುರ ಬ್ಯಾರೇಜ್ (46.96+13.18)	Chandapur (46.96+13.18)	0.10	1.00
47	*ಎಸ್ ಸಿ ಪಿ/ ಟಿ ಎಸ್ ಪಿ*	*SCP/TSP component works*	*193.12*	*485.15*
48	ನಂದವಾಡಗಿ ಏತ ನೀರಾವರಿ ಯೋಜನೆ	Nandawadagi LIS	0.51	40.33
49	ಬೂದಿಹಾಳ್ – ಪೀರಾಪುರ್ ಏತ ನೀರಾವರಿ ಯೋಜನೆ	Budhihal-Peerapur LIS	0.35	262.38
50	ನಾಗರಬೆಟ್ಟ ಏ.ನೀ.ಯೋ	Nagarbette LIS	0.00	0.01
51	ಸಂಖ್ ಏತ ನೀರಾವರಿ ಯೋಜನೆ	sankh LIS	22.09	27.99
52	ಜಟ್ಟೂರು ಬ್ಯಾರೇಜ್ & ಸೇತುವೆ (ಕಾಗಿನ ನದಿಗೆ ಅಡ್ಡಲಾಗಿ)	Jettur Bridge Cum Barrage across Kagina River	0.00	0.00
53		Stage-III		
54	ಮುಳವಾಡ ಏತ ನೀರಾವರಿ ಯೋಜನೆ	Mulwad LIS	822.78	1101.26
55	ಚಿಮ್ಮಲಗಿ ಏತ ನೀರಾವರಿ ಯೋಜನೆ	Chimmalagi LIS	264.79	66.92
56	ನಾರಾಯಣಪುರ ಬಲದಂಡೆ ಕಾಲುವೆಯ ಆಧುನೀಕರಣ	NRBC Extension	16.34	30.68
57	ಇಂಡಿ ಏತ ನೀರಾವರಿ ಯೋಜನೆ (97.30 ಕಿ.ಮೀ ಯಿಂದ)	Indi LIS (Above 97.30 km)	5.90	20.82
58	ಕೊಪ್ಪಳ್ ಏತ ನೀರಾವರಿ ಯೋಜನೆ	Koppal LIS	101.69	25.48
59	ಹೆರಕಲ್ ಏತ ನೀರಾವರಿ ಯೋಜನೆ	Hercal LIS	60.76	52.02
60	ಮಲ್ಲಾಬಾದ್ ಏತ ನೀರಾವರಿ ಯೋಜನೆ	Mallabad LIS	17.67	12.18
61	ಭೀಮ ಫ್ಲಾಂಕ್ ಏತ ನೀರಾವರಿ ಯೋಜನೆ	Bhima flank LIS	2.05	2.96
62	ರಾಂಪುರ ಏತ ನೀರಾವರಿ ಯೋಜನೆ	Rampur LIS	5.92	1.53
63	ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಹಾಗೂ ಬಾಪಅಪ್ರಾ	R & R, BTDA	814.94	703.87
64	ಆಲಮಟ್ಟಿ ಅಣೆಕಟ್ಟಿನ ಗೇಟ್‌ಗಳ ಎತ್ತರವನ್ನು ಹೆಚ್ಚಿಸುವ ಕುರಿತು.	Raising of Alamatti gates	0.00	0.00
65	ನಾರಾಯಣಪುರ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗಳು (ಕಿ.ಮೀ 42 ಯಿಂದ 72) (2012)	NLBC Modernisation-ERM project(km 42to 72)(2012)	285.23	105.84
66	ಆಲಮಟ್ಟಿ ಡ್ಯಾಂ ಡ್ರಿಪ್	Almatti, Dam Rehabilitation Project	38.56	21.62
67	ನಾರಾಯಣಪುರ ಡ್ಯಾಂ ಡ್ರಿಪ್	N' pura, Dam Rehabilitation Project	14.63	65.40
68	ಸಾಲ ಮೇಲ್ವಸ್ತುವಾರಿ	Debt Service	454.09	584.66
	ಒಟ್ಟು ಮೊತ್ತ	Grand total	4139.56	4427.93

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

ಅನುಬಂಧ-1 ಬ

	ಕಾಮಗಾರಿ	PROJECT COMPONENTS	2018-19
I	ಕೃಮೇಯೋ – ಹಂತ – III ರ ಕಾಮಗಾರಿಗಳು	UKP Stage-III	Rs.In crore
1	ಮುಳವಾಡ ಏತ ನೀರಾವರಿ ಯೋಜನೆ	Mulwad LIS	357.59
2	ಚಿಮ್ಮಲಗಿ ಏತ ನೀರಾವರಿ ಯೋಜನೆ	Chimmalagi LIS (Includes Nagatanna	43.26
3	ನಾರಾಯಣಪುರ ಬಲದಂಡೆ ಕಾಲುವೆಯ ವಿಸ್ತರಣೆ	NRBC Extension	112.20
4	ಇಂಡಿ ಏತ ನೀರಾವರಿ ಯೋಜನೆ (97.30 ಕಿ.ಮೀ ಯಿಂದ)	Indi LIS (Above 97.30 km)	4.09
5	ಕೊಪ್ಪಳ ಏತ ನೀರಾವರಿ ಯೋಜನೆ	Koppal LIS (4730 crs with drip irr)	18.32
6	ಹೆರಕಲ್ ಏತ ನೀರಾವರಿ ಯೋಜನೆ	Herkal LIS	29.73
7	ಮಲ್ಲಾಬಾದ್ ಏತ ನೀರಾವರಿ ಯೋಜನೆ	Mallabad LIS	23.03
8	ಭೀಮ ಫ್ಲಾಂಕ್ ಏತ ನೀರಾವರಿ ಯೋಜನೆ	Bhima flank LIS	2.92
9	ರಾಂಪುರ ಏತ ನೀರಾವರಿ ಯೋಜನೆ	Rampur LIS	9.39
10	ಆಲಮಟ್ಟಿ ಅಣೆಕಟ್ಟಿನ ಗೇಟ್‌ಗಳ ಎತ್ತರವನ್ನು ಹೆಚ್ಚಿಸುವ ಕುರಿತು.	Raising of Alamatti gates	0.00
11	ಬಾಪಅಪ್ರಾ	BTDA	183.20
12	ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ	R & R	1.40
13	ಭೂಸ್ವಾಧೀನ	LAQ includes SCP/TSP and EST	293.58
II	ಕೃಮೇಯೋ – ಹಂತ – I & II ರ ಕಾಮಗಾರಿಗಳು	UKP Stage-I & II	
15	ಬಾಪಅಪ್ರಾ	BTDA	2.45
16	ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ	R & R	77.02
17	ಭೂಸ್ವಾಧೀನ	LAQ	65.84
18	ಭೂಸ್ವಾಧೀನ ಮತ್ತು ಮುಳುಗಡೆ	Land Acquisition&Subme- for Additional proj	0.00
19	ಎಆರ್‌ಬಿಸಿ ಕಾಲುವೆಯ ಮೇಲೆ ಸೌರಫಲಕ ಅಳವಡಿಕೆ	ARBC-Solar panel on canal &KLIS	21.97
20	ಎನ್‌ಆರ್‌ಬಿಸಿ ವಿತರಣಾ ಕಾಲುವೆ 9ಎ (ವಡವಟ್ಟಿ, ಅರಕೇರ ಒಳಗೊಂಡಂತೆ)	NRBC DY 9A(Includes Wadavatti,Arkera)	4.27
21	ಕಾಡಾ ಹೊಲಗಾಲುವೆ ಕಾಮಗಾರಿಗಳು	CADA FIC works (Including EST)	17.16
22	ರಾಂಥಾಳ್ ಏತ ನೀರಾವರಿ ಯೋಜನೆ	Ramthal Lift Irrigation Scheme	4.13
23	ರಾಂಥಾಳ್ ಏತ ನೀರಾವರಿ ಯೋಜನೆ (ಹನಿ ನೀರಾವರಿ ಯೋಜನೆ)	Ramthal Lift Irrigation Scheme-drip irrg	8.36
24	ಕಲ್ಲೂರು ಬಿ ಬ್ಯಾರೇಜ್	Kallur B barrage	0.00
25	ಘಟ್ಟರಗಾ ಬ್ಯಾರೇಜ್	Ghattarga Barrage	0.00
26	ಸನ್ನತಿ ಪರೀಷ್ಕತ ಯೋಜನೆ	Sonthi Modified	6.42
27	ಯಾದಗಿರಿ	Yadigiri	0.00
28	ಜೋಳದಡಗಿ ಗುಡೂರು ಬ್ಯಾರೇಜ್	Joladadagi Gudur	0.00
29	ಸೊನ್ನ ಏತ ನೀರಾವರಿ ಯೋಜನೆ	Sonna LIS	0.28
30	ರೊಳ್ಳಿ ಮನ್ನಿಕೇರಿ ಏತ ನೀರಾವರಿ ಯೋಜನೆ (2010)	Rolli mannikeri LIS (2010)	0.52
31	ಗೂಗಲ್ ಬ್ಯಾರೇಜ್ (2003)	Gugal barrage (2003)	1.93
32	ತೆಗ್ಗಿ – ಸಿದ್ದಾಪುರ ಏತ ನೀರಾವರಿ ಯೋಜನೆ	Tegi Siddhapur LIS. (2010)	1.49
33	ತಿಮ್ಮಾಪುರ ಏತ ನೀರಾವರಿ ಯೋಜನೆ	Thimmapur LIS (2006)	2.63
34	ರಾಜನ್ ಕೊಳ್ಳೂರು ಏತ ನೀರಾವರಿ ಯೋಜನೆ	Rajan kolur LIS	0.29
35	ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕೆರೆ ತುಂಬುವ ಯೋಜನೆ	Filling of tanks in Bijapur,Bagalkot (2009)	0.18
36	ಅಣಚಿ ಏತ ನೀರಾವರಿ ಯೋಜನೆ	Filling up of tank- Anachi LIS-	0.05
37	ಭುಯ್ಯಾರ್ ಏತ ನೀರಾವರಿ ಯೋಜನೆ	Filling up of tank- Bhuyar LIS-	5.55

38	ವಿಜಾಪುರ ಜಿಲ್ಲೆಯ ಮಮದಾಪುರ, ಸರವಾಡ, ಬಬಲೇಶ್ವರ, ಭೂತನಾಳ್, ಬೇಗಂ ತಲಾಬ್ ಮತ್ತು ತಿಡಗುಂಡಿಯ ಕೆರೆ ತುಂಬುವ ಯೋಜನೆ	Filling up of tank-Mamdapur,Sarwad,Bableshwar,Bhutnal,Begumtalab&Tidagundi in Bijapur Dt.	-0.77
39	ಚಡಚಣ ಏತ ನೀರಾವರಿ ಯೋಜನೆ	Chadchan LIS	111.40
40	ಚಿಕ್ಕ ಪಡಸಲಗಿ ಬ್ಯಾರೇಜ್ (ಕುಡಿಯುವ ನೀರಿನ ಯೋಜನೆ)	Chikka padasalgi barrage-drinking water	0.00
41	ಜೀರಗಿಹಾಳ್ ಬ್ಯಾರೇಜ್ (42.77+14.38) (2006)	Jirgihall (42.77+14.38) (200	1.51
42	ಮಾಣಿಕೇಶ್ವರ ಬ್ಯಾರೇಜ್ (42.60+11.84) (2006)	Manikeshwara (42.60+11.84) (2006	1.40
43	ಹಾಲಹಳ್ಳಿ ಬ್ಯಾರೇಜ್ (59.13+26.69) (2006)	Halahalli (59.13+26.69) (200	0.90
44	ಚಂದಾಪುರ ಬ್ಯಾರೇಜ್ (46.96+13.18)	Chandapur (46.96+13.18)	0.91
45	ನಂದವಾಡಗಿ ಏತ ನೀರಾವರಿ ಯೋಜನೆ	Nandawadagi LIS	106.97
46	ದೇವತ್‌ಕಲ್ ಬ್ಯಾರೇಜ್	Devatkal	0.00
47	ಬೂದಿಹಾಳ್ – ಪೀರಾಪುರ್ ಏತ ನೀರಾವರಿ ಯೋಜನೆ	Budhihal-Peerapur LIS	144.31
48	ನಾಗರಬೆಟ್ಟ ಏ.ನೀ.ಯೋ	Nagarbette LIS	25.25
49	ಯರಕಲ್ (ದಕ್ಷಿಣ) ಏ.ನೀ. ವಿಸ್ತರಣೆ	Herkal (South) LIS extension	0.00
50	ಯಾದ್‌ಗಿರಿ ಬ್ರಿಜ್ ಕಂ. ಬ್ಯಾರೇಜ್‌ಗೆ ವರ್ಟಿಕಲ್ ಗೇಟ್ ಅಳವಡಿಕೆ	Providing vertical lift gates to Yadgir BCB	35.39
51	ಜೋಳದಡಗಿ ಗುಡೂರು ಬ್ಯಾರೇಜ್‌ಗೆ ಗೇಟ್ ಅಳವಡಿಕೆ	Providing vertical lift gates to Joladadgi-Gudur barrage	37.15
52	ಕೆಲ್ಲೂರ್– ಬಿ–ಬ್ಯಾರೇಜ್	Providing vertical lift gates to Kallur B barrage	0.17
53	ಘತ್ತರಗಾ ಬ್ಯಾರೇಜ್	Providing vertical lift gates to Ghatarga barrage	0.00
54	ಕೊರ್ತಿ ಕೊಲ್ಹಾರ್ ಬ್ಯಾರೇಜ್‌ನ್ನು ಶಕ್ತಿಯುತಗೊಳಿಸುವುದು	Strengthening of Korti-Kolar Barrage across River Krishna	0.00
55	ಬೇಗಂ ತಾಲಾಬ್ ಅಭಿವೃದ್ಧಿ	Water front Devolpment of Begum Talab	1.49
56	ಸೊಂತಿ ಯೋಜನೆಯಡಿ 35 ಕೆರೆ ತುಂಬುವ ಯೋಜನೆ	Filling up 35 tanks under sonthi command	120.75
57	ಆಲಮಟ್ಟಿ ಎಡದಂಡೆ ಕಾಲುವೆ ರೀಮಾಡ್ಲಿಂಗ್	Remodelling of ALBC	41.30
58	ಮಲ್ಲಪ್ರಭಾ ನದಿಗೆ ಅಡ್ಡಲಾಗಿ ಅಡವಿಹಾಳ್–ಕೂಡಲಸಂಗಮ ಸೇತುವೆ	Adavihal-Kudal Sangam Bridge acros	10.62
59	ಸಂಖ್ ಏತ ನೀರಾವರಿ ಯೋಜನೆ	Filling up of tank- Sankh LIS	4.13
60	ಜಟ್ಟೂರು ಬ್ಯಾರೇಜ್ & ಸೇತುವೆ (ಕಾಗಿನ ನದಿಗೆ ಅಡ್ಡಲಾಗಿ)	Jettur Bridge Cum Barrage across Kagina River	16.18
61	ಯಳ್ಳಿಗುಟ್ಟ ಏ.ನೀ.ಯೋ.	Yelligutta LIS	0.00
62	ನಬಾರ್ಡ	NABARD	
63	ಕೊಂಗಂಡಿ ಕೆರೆ ತುಂಬುವ ಯೋಜನೆ	NABARD-Kongendi filling of MI tanks	0.01
64	ಯರಗೋಳ ಕೆರೆ ತುಂಬುವ ಯೋಜನೆ	NABARD-Yaragol tanks	25.22
65	ನಾರಾಯಣಪುರ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗಳು (ಕಿ.ಮೀ 42 ಯಿಂದ 72) (2012)	NLBC Modernisation-ERM project(km 42to 72)(2012) includes scp-tsp 18-19	92.30
66	ನಾರಾಯಣಪುರ ಬ.ದಂ.ಕಾ. ರೀಮೋಡ್ಲಿಂಗ್ ಕಿ.ಮೀ.0.00 ರಿಂದ 95.00	Remodelling of NRBC KM.0.00 to 95.00	0.05
67	ಬೂದಿಹಾಳ್–ಪೀರಾಪುರ ಕೆಳಗೆ ಬರುವ ಹೆಚ್ಚುವರಿ ಆದೇಶ ಪ್ರದೇಶ	Additional Command Area under Bud	0.00
68	ನಂದವಾಡಗಿ ಏ.ನೀ.ಯೋ. ಕೆಳಗೆ ಬರುವ ಹೆಚ್ಚುವರಿ ಆದೇಶ ಪ್ರದೇಶ	Additional Command Area under Nandavadagi LIS	0.00
69	ಎಸ್‌ಸಿಪಿ ಕಾಮಗಾರಿಗಳು	SCP component works	197.04
70	ಎಸ್‌ಸಿಪಿ ಕಾಮಗಾರಿಗಳು (7ಬಿ)	SCP component works (7 b)	124.76
71	ಟಿಎಸ್‌ಪಿ ಕಾಮಗಾರಿಗಳು	TSP component works	74.01
72	ಟಿಎಸ್‌ಪಿ ಕಾಮಗಾರಿಗಳು (7ಬಿ)	TSP component works (7 b)	82.98

3	ಆಲಮಟ್ಟಿ ಅಣೆಕಟ್ಟು ಮತ್ತು ಅಣೆಕಟ್ಟಿನ ಇತರೆ ಕಾಮಗಾರಿಗಳು (ಉದ್ಯಾನವನ ಕಾಮಗಾರಿಗಳು, ಹಾಗೂ ಅರಣ್ಯೀಕರಣ ಒಳಗೊಂಡಂತೆ)	Almatti Dam & Allied works(inludes land scape,dcf etc	39.13
74	ನಾರಾಯಣಪುರ ಅಣೆಕಟ್ಟು ಮತ್ತು ಅಣೆಕಟ್ಟಿನ ಇತರೆ ಕಾಮಗಾರಿಗಳು	Narayanapur Dam & allied works	2.19
75	ನಾರಾಯಣಪುರ ಎಡದಂಡೆ ಕಾಲುವೆ	Narayanapur Left Bank Canal	1.53
76	ಎಸ್‌ಬಿ ಕಾಲುವೆ (ಬೋನಾಳ್ ಏತ ನೀರಾವರಿ ಯೋಜನೆ ಒಳಗೊಂಡಂತೆ)	SB Canal (Inclding Bonal LIS (2010)	0.16
77	ಇಂಡಿ ಶಾಖಾ ಕಾಲುವೆ (2011–12 ಇಟಗಾ ಸಂಗಮ ವೆಚ್ಚ 4.50 ಕೋಟಿ ಒಳಗೊಂಡಂತೆ)	Indi Branch Canal (2011-12-itaga sangam cost 4.50crs)	0.05
78	ಜೇವರ್ಗಿ ಶಾಖಾ ಕಾಲುವೆ	Jewargi Branch Canal	0.02
79	ಮುದಬಾಳ ಶಾಖಾ ಕಾಲುವೆ	Mudbal Branch Canal	0.00
80	ನಾರಾಯಣಪುರ ಬಲದಂಡೆ ಕಾಲುವೆ	Narayanapur Right Bank Canal	0.25
81	ಇಂಡಿ ಏತ ನೀರಾವರಿ ಯೋಜನೆ	Indi Lift Irrigation Scheme.	2.58
82	ಆಲಮಟ್ಟಿ ಎಡದಂಡೆ ಕಾಲುವೆ	Almatti Left Bank Canal & CLIS	5.58
83	ಆಲಮಟ್ಟಿ ಬಲದಂಡೆ ಕಾಲುವೆ	Almatti Right Bank Canal - HW	1.02
84	ಮುಳವಾಡ ಏತ ನೀರಾವರಿ ಯೋಜನೆ (ರೂ.1.00 ಕೋಟಿ ಹೆಚ್ಚುವರಿ ಮೊತ್ತ ಒಳಗೊಂಡಂತೆ)	Mulwad Lift Irrigation	16.77
85	ರಾಂಪುರ ಏತ ನೀರಾವರಿ ಯೋಜನೆ (ರೂ 3.25 ಕೋಟಿ ಹೆಚ್ಚುವರಿ ಮೊತ್ತ ಒಳಗೊಂಡಂತೆ)	Rampur Lift Irrigation Scheme	14.46
86	ಆಲಮಟ್ಟಿ ಡ್ಯಾಂ ಡ್ರಿಪ್	Almatti Dam DRIP	5.26
87	ನಾರಾಯಣಪುರ ಡ್ಯಾಂ ಡ್ರಿಪ್	Narayanapura Dam DRIP	31.71
	ಆಡಳಿತ & ವೇತನ ವೆಚ್ಚಗಳು	Establishment and Salary expenses	125.41
	ಇತರೆ	Others	242.28
	ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಮಗಾರಿಗಳುಬಾಪಅಪ್ಪಾ ಕಾಮಗಾರಿಗಳು (ರೂ.50.00 ಕೋಟಿ ಹೆಚ್ಚುವರಿ ಮೊತ್ತ ಒಳಗೊಂಡಂತೆ)ಭೂಸ್ವಾಧೀನ ಮತ್ತು ಮುಳುಗಡೆ (ಹೆಚ್ಚುವರಿ ರೂ.115 ಕೋಟಿ ಒಳಗೊಂಡಂತೆ) 10 ಹಳ್ಳಿಗಳಲ್ಲಿನ ಕಟ್ಟಡಗಳಿಗೆ ಪರಿಹಾರ ಬಾಪಅಪ್ಪಾ ವಿಶೇಷ ಪ್ಯಾಕೇಜ್ – ಸಿವಿಲ್ ಕಾಮಗಾರಿಗಳು	Structural compnesation towards 10 villages of Hungund taluk submerged in the back water of Naranapur dam.(GO NO:RD/224/REH/2005 DT.4.1.07 & 257A /TECH/335/7.9.2009) and (SONTHI LAQ)	5.32
88	ಸಾಲ ಮೇಲ್ವಿಚಾರಣೆ	Debt Service	1286.6864
	ಒಟ್ಟು ಮೊತ್ತ	Grand total	4335.07

ಅನುಬಂಧ – 2
ಯೋಜನೆಗಳ ಪ್ರಗತಿಯ ವಿವರಗಳು.

ಕ್ರ ಸಂ.	ಯೋಜನೆ	ಯೋಜನೆಯ ಪ್ರಗತಿಯ ವಿವರಗಳು
1	ಕೃಮೇ.ಯೋ. ಹಂತ–3	ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–2ರ ತೀರ್ಪಿನ ಮೇರೆಗೆ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆಯನ್ನು ಆರ್‌ಎಲ್ 519.60 ಮೀ. ರಿಂದ 524.256 ಮೀ.ಗೆ ಹೆಚ್ಚಿಸುವುದಾಗಿರುತ್ತದೆ ಹಾಗೂ ಉತ್ತರ ಕರ್ನಾಟಕದ ಬಿಜಾಪುರ, ಬಾಗಲಕೋಟ, ಗುಲಬರ್ಗಾ, ಯಾದಗಿರ್, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿಯ ಒಟ್ಟು 5.94 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸುವುದಾಗಿರುತ್ತದೆ. ಇದಲ್ಲದೇ, ಕೃಮೇ.ಯೋ. ಹಂತ–3 ರಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಜಮೀನುಗಳ ಭೂಸ್ವಾಧೀನತೆ ಮತ್ತು 20 ಗ್ರಾಮಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಒಳಗೊಂಡಿರುತ್ತದೆ. ಕೃಮೇ.ಯೋ. ಹಂತ–3 ರಡಿ ಒಟ್ಟು 9 ಉಪ ಯೋಜನೆಗಳ ಅನುಷ್ಠಾನ ಕೈಗೊಳ್ಳಬೇಕಾಗಿದ್ದು, ಈಗಾಗಲೇ ಮುಳವಾಡ, ಚಿಮ್ಮಲಗಿ, ಇಂಡಿ, ರಾಂಪುರ, ಮಲ್ಲಾಬಾದ್, ಕೊಪ್ಪಳ ಹಾಗೂ ಹೇರಕಲ್ ಏತ ನೀರಾವರಿ ಯೋಜನೆಗಳು ಮತ್ತು ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಹಾಗೂ ಭೀಮಾ ಫ್ಲಾಂಕ್ ಉಪ ಯೋಜನೆಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಇದರ ಜೊತೆಗೆ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮಗಳ ಪುನರ್‌ನಿರ್ಮಾಣ ಮತ್ತು ಪುನರ್ವಸತಿ, ಹಿನ್ನೀರಿನಲ್ಲಿ ಮುಳುಗಡೆ ಹೊಂದುವ ಜಮೀನುಗಳ ಭೂಸ್ವಾಧೀನತೆ ಹಾಗೂ ಬಾಗಲಕೋಟ ಪಟ್ಟಣದ ಪುನರ್ವಸತಿ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಳ್ಳಲಾಗಿದ್ದು, ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಹೊಸ ಭೂಸ್ವಾಧೀನ ಕಾಯ್ದೆ 2013 ರನ್ವಯ ಪ್ರಸಕ್ತ ಅನುಷ್ಠಾನಗೊಳಿಸುತ್ತಿರುವ ಯೋಜನೆಯಡಿಯ ಭೂಸ್ವಾಧೀನ ಹಾಗೂ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಲ್ಪಿಸುತ್ತಿರುವುದರಿಂದ ಯೋಜನೆಯ ಅಂದಾಜು ವೆಚ್ಚದಲ್ಲಿ ಗಣನೀಯ ಹೆಚ್ಚಳ ಉಂಟಾಗಿದೆ. ಮುಳುಗಡೆ ಹೊಂದುವ ಜಮೀನಿಗೆ ಏಕ ರೂಪ ದರ ನಿಗದಿಪಡಿಸುವ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ.
2	ರಾಮಥಾಳ (ಮರೋಳ) ಏತ ನೀರಾವರಿ	ಯೋಜನೆ ಕಾಮಗಾರಿಗಳು ಪೂರ್ಣಗೊಂಡಿದ್ದು ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.
3	ತಿಮ್ಮಾಪುರ ಏತ ನೀರಾವರಿ	
4	ತೆಗ್ಗಿ–ಸಿದ್ದಾಪುರ ಏತ ನೀರಾವರಿ	
5	ರೊಳ್ಳಿ–ಮನ್ನಿಕೇರಿ ಏತ ನೀರಾವರಿ	
6	ಸನ್ನತಿ ಏತ ನೀರಾವರಿ ಯೋಜನೆ	ಯೋಜನೆಯಡಿ ಭೀಮಾ ನದಿಗೆ ಅಡ್ಡಲಾಗಿ ಸನ್ನತಿ ಬ್ರಿಡ್ಜ್–ಕಂ–ಬ್ಯಾರೇಜ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ನೀರು ಸಂಗ್ರಹಿಸಲಾಗಿರುತ್ತದೆ. ಸನ್ನತಿ ಏತ ನೀರಾವರಿ ಯೋಜನೆಯಡಿಯ ಮುಖ್ಯ ಸ್ಥಾವರದ ಬಾಕಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಯೋಜನೆಯ ಕಾಲುವೆ ಜಾಲದಡಿ 1.75 ಕಿ.ಮೀ. ಉದ್ದದ ಫೀಡರ್ ಕಾಲುವೆ ಕಾಮಗಾರಿ ಪೂರ್ಣಗೊಂಡಿದೆ. ಮುಖ್ಯ ಕಾಲುವೆ ಕಿ.ಮೀ. 0.00 ರಿಂದ 40.00, ಶಾಖಾ ಕಾಲುವೆ ಕಿ.ಮೀ. 0.00 ರಿಂದ 20.02, ವಿತರಣಾ ಕಾಲುವೆ ಸಂ.1 ಕಿ.ಮೀ. 0.00 ರಿಂದ 15.00 ಹಾಗೂ ಯರಗೋಳ ಮೈನರ್ ಕಾಲುವೆ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಪ್ರಸ್ತುತ ಪೂರ್ಣಗೊಂಡಿರುವ ಕಾಲುವೆ ಜಾಲದಡಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಕೆರೆಗಳು ತುಂಬಿಸುವುದು ಒಳಗೊಂಡಂತೆ ನೀರು ಹರಿಸಲಾಗಿರುತ್ತದೆ.
7	ನಾರಾಯಣಪುರ ಬಲದಂಡೆ ವಿತರಣಾ ಕಾಲುವೆ ಸಂ.9(ಎ)	ನಾಬದಂಕಾ ವಿತರಣಾ ಕಾಲುವೆ ಸಂ.9(ಎ) ಕಿ.ಮೀ. 0.00 ರಿಂದ 29.15 ಹಾಗೂ ಆರಕೇರಾ ಶಾಖಾ ಕಾಲುವೆ ಕಿ.ಮೀ. 0.00 ರಿಂದ 22.00 ರವರೆಗಿನ ಲ್ಯಾಟರಲ್ ಕಾಮಗಾರಿಗಳು ಒಳಗೊಂಡಂತೆ ಪೂರ್ಣಗೊಂಡಿದ್ದು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಮುಂದುವರೆದು ಯೋಜನೆಯಡಿ ಪಡವಟ್ಟಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 10.00 ಪೂರ್ಣಗೊಂಡಿದ್ದು ಕಿ.ಮೀ.10.00 ರಿಂದ 28.00 ರವರೆಗಿನ ಕಾಲುವೆ ಜಾಲದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಕಿ.ಮೀ.0.00 ರಿಂದ 10.00 ರಡಿಯ ಕಾಲುವೆ ಜಾಲಕ್ಕೆ ಪ್ರಾಯೋಜಿಕವಾಗಿ ನೀರು ಹರಿಸಲಾಗಿದೆ.
8	ಮಾಂಜ್ರಾ ಬ್ಯಾರೇಜುಗಳು	ಬೀದರ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ ಜೀರಗಿಹಾಳ, ಮಾಣಿಕೇಶ್ವರ, ಹಾಲಹಳ್ಳಿ ಮತ್ತು ಚಂದಾಪೂರ ಸರಣಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳ ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಬ್ಯಾರೇಜುಗಳಡಿ ಸಂಗ್ರಹಣೆಗೊಳ್ಳುವ ನೀರನ್ನು ರೈತರು ತಮ್ಮ ಸ್ವಂತ ಪಂಪಸೆಟ್ ಬಳಕೆಯಿಂದ ನೀರಾವರಿ ಸೌಲಭ್ಯ ಪಡೆಯುವುದಾಗಿರುತ್ತದೆ.
9	ಗೂಗಲ್ ಬ್ಯಾರೇಜುಗಳು	ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ.
10	ಅಣಚಿ ಲಿಫ್ಟ್ – ಇಂಡಿ ತಾಲ್ಲೂಕಿನಡಿ 9 ಕೆರೆ ತುಂಬುವ ಯೋಜನೆ	ಸದರಿ ಕೆರೆ ತುಂಬುವ ಯೋಜನೆಗಳು ಪೂರ್ಣಗೊಂಡಿದ್ದು ಕೆರೆಗಳಿಗೆ ನದಿ ಪಾತ್ರದಿಂದ ನೀರು ಲಿಫ್ಟ್ ಮಾಡಿ ತುಂಬಿಸಲಾಗುತ್ತಿದೆ.
11	ವಿಜಯಾಪುರ ಜಿಲ್ಲೆಯಡಿ ಮಮದಾಪುರ, ಬೂತನಾಳ, ಬೇಗಂ ತಲಾಬ್ & ಇತರೆ ಕೆರೆ ತುಂಬುವ ಯೋಜನೆ	
12	ಭುಯ್ಯಾರ್ ಲಿಫ್ಟ್ – ಇಂಡಿ ತಾಲ್ಲೂಕಿನಡಿ 8 ಕೆರೆ ತುಂಬುವ ಯೋಜನೆ	
13	ನಂದವಾಡಗಿ ಏತ ನೀರಾವರಿ	ಯೋಜನೆಯಡಿಯ ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ಮುಂದುವರೆದು ಯೋಜನೆಯಡಿ 36,100ಹೆ. ಅಚ್ಚುಕಟ್ಟು ಕ್ಷೇತ್ರಕ್ಕೆ ಹನಿ ನೀರಾವರಿ ಕಲ್ಪಿಸುವ 3 ಪ್ಯಾಕೇಜ್ ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಗುತ್ತಿಗೆ ವಹಿಸಿದ್ದು, ಪ್ರಗತಿಯಲ್ಲಿರುತ್ತವೆ.
14	ಬೂದಿಹಾಳ–ಪೀರಾಪುರ ಏತ ನೀರಾವರಿ	ಯೋಜನೆಯಡಿಯ ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ಮುಂದುವರೆದು ಯೋಜನೆಯಡಿ ನೀರಾವರಿ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗಳಿಗೆ ಅಂದಾಜು ಪ್ರಸ್ತಾವನೆ ತಯಾರಿಸುವ ಹಂತದಲ್ಲಿದೆ.

ಕ್ರಮ ಸಂ.	ಯೋಜನೆ	ಯೋಜನೆಯ ಪ್ರಗತಿಯ ವಿವರಗಳು
16	ಘಟಪ್ರಭಾ ನದಿಗೆ ಅಡ್ಡಲಾಗಿ ಅಡವಿಹಾಳ-ಕೂಡಲಸಂಗಮ ಸೇತುವೆ	ಸೇತುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.
16	ಚಟಚಣ ಏತ ನೀರಾವರಿ	ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಯೋಜನೆಯಡಿ ಪ್ರಥಮ ಬಾರಿಗೆ ಉದ್ದೇಶಿತ 9,215 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಪೈಪ್ ಲೈನ್ ಜಾಲದ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು ಕಾಮಗಾರಿ ಮುಂದುವರೆದ ಪ್ರಗತಿಯಲ್ಲಿದೆ.
17	ಹೇರಕಲ್ (ದಕ್ಷಿಣ) ಏತ ನೀರಾವರಿ ಯೋಜನೆ ವಿಸ್ತರಣೆ	ಯೋಜನೆಯಡಿಯ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಯು ಪ್ರಗತಿಯಲ್ಲಿದೆ. ಮುಂದುವರೆದು ಯೋಜನೆಯಡಿ ನೀರಾವರಿ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗಳ ಅಂದಾಜು ಪ್ರಸ್ತಾವನೆ ತಯಾರಿಸಲಾಗಿದೆ.
18	ಯಾದಗಿರ, ಜೋಳದಡಗಿ-ಗೂಡುರ, ಛತ್ತರಗಾ & ಕಲ್ಲೂರು-ಬಿ ಬ್ಯಾರೇಜುಗಳಿಗೆ ಆಧುನಿಕ ಗೇಟ್‌ಗಳ ಅಳವಡಿಕೆ ಕಾಮಗಾರಿಗಳು	ಭೀಮಾ ನದಿ ಪಾತ್ರದಡಿಯ ಯಾದಗಿರ ಮತ್ತು ಜೋಳದಡಗಿ-ಗೂಡುರ, ಬ್ಯಾರೇಜುಗಳಿಗೆ ಆಧುನಿಕ ಯಾಂತ್ರಿಕ ಕಾರ್ಯಾಚರಣೆಯ ವರ್ಟಿಕಲ್ ಗೇಟ್‌ಗಳ ಅಳವಡಿಕೆ ಬಹುತೇಕ ಪೂರ್ಣಗೊಂಡಿವೆ. ಇನ್ನುಳಿದಂತೆ ಛತ್ತರಗಾ & ಕಲ್ಲೂರು-ಬಿ ಬ್ಯಾರೇಜುಗಳಿಗೆ ವರ್ಟಿಕಲ್ ಗೇಟ್‌ಗಳ ಅಳವಡಿಕೆ ಟರ್ನ್ ಕೀ ಆಧಾರದ 2 ಕಾಮಗಾರಿಗಳು ಟರ್ನ್ ಕೀ ಆಧಾರದ ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ
19	ಸನ್ನತಿ ಯೋಜನೆಯಡಿ ಯಾದಗಿರಿ ತಾಲ್ಲೂಕಿನ 35 ಕೆರೆಗಳಿಗೆ ನೀರು ತುಂಬಿಸುವ ಯೋಜನೆ	ಯೋಜನೆಯಡಿ ಕೆರೆ ತುಂಬಿಸುವ ಟರ್ನ್ ಕೀ ಆಧಾರದ ಮೇಲೆ ವಹಿಸಲಾದ ಕಾಮಗಾರಿಯು ಪ್ರಗತಿಯಲ್ಲಿದೆ.
20	ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ	ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆ ಕಿ.ಮೀ.0.00 ರಿಂದ 67.00 (ಆಯ್ದ ರೀಚ್‌ಗಳು) ವಿತರಣಾ ಕಾಲುವೆ ಒಳಗೊಂಡ ಆಧುನೀಕರಣ ಕಾಮಗಾರಿ ಪ್ರಗತಿಯಲ್ಲಿದೆ.ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ.
21	ಕೊರ್ತಿ-ಕೊಲ್ಹಾರ್ ಬ್ಯಾರೇಜ್ ಪುನಶ್ಚೇತನ	ಕಾಮಗಾರಿ ಪ್ರಗತಿಯಲ್ಲಿದೆ.
22	ಬೇಗಂ ತಲಾಬ್ ಸಣ್ಣ ನೀರಾವರಿ ಕೆರೆಯ ಜಲಾಭಿವೃದ್ಧಿ ಕಾಮಗಾರಿ	ಕಾಮಗಾರಿ ಪ್ರಗತಿಯಲ್ಲಿದೆ.
24	ಕೃಮೇ.ಯೋ. ಹಂತ-1 & 2 ಬಾಕಿ ಕಾಮಗಾರಿಗಳು	ಕೃಮೇ.ಯೋ. ಹಂತ-1 & 2 ಯೋಜನಾ ಕಾಮಗಾರಿಗಳು ಪೂರ್ಣಗೊಂಡಿದ್ದು ಈಗಾಗಲೇ ಸೃಜಿಸಲಾದ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.
25	ಭೂಸ್ವಾಧೀನ, ಪುನರವಸತಿ & ಪುನರ್ ನಿರ್ಮಾಣ	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ 75,563 ಎಕರೆ ಮುಳುಗಡೆ ಹೊಂದುವ ಜಮೀನಿನ ಭೂಸ್ವಾಧೀನತೆ, ಮುಳುಗಡೆ ಹೊಂದುವ 20 ಗ್ರಾಮಗಳ & ಬಾಗಲಕೋಟ ಪಟ್ಟಣದ ಪುನರ್ವಸತಿಗಾಗಿ 6,467 ಎಕರೆ ಜಮೀನಿನ ಭೂಸ್ವಾಧೀನತೆ, ಕಾಲುವೆ ಜಾಲ ನಿರ್ಮಾಣಕ್ಕಾಗಿ 51,837 ಎಕರೆ ರಂತೆ ಒಟ್ಟು 1,33,867 ಲಕ್ಷ ಎಕರೆ & "ನ್ಯಾಯಬದ್ಧ ಮತ್ತು ಪಾರದರ್ಶಕ ಭೂಸ್ವಾಧೀನ ಪುನರ್ವಸತಿ & ಪುನರ್‌ನಿರ್ಮಾಣ ಕಾಯ್ದೆ 2013" ರನ್ವಯ ಜರುಗಿಸುವುದಾಗಿರುತ್ತದೆ. ಇದುವರೆಗೂ ಸುಮಾರು 72,000 ಎಕರೆ ಜಮೀನು ಭೂಸ್ವಾಧೀನತೆಗೆ ಹಾಗೂ 13,731 ಕಟ್ಟಡಗಳ ಸ್ವಾಧೀನತೆಗೆ 11(1) ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು ಈ ಪೈಕಿ ಸುಮಾರು 17,631 ಎಕರೆ ಜಮೀನು ಹಾಗೂ 2,236 ಕಟ್ಟಡಗಳ ಸ್ವಾಧೀನತೆಗೆ ಐತೀರ್ಪು ಮಾಡಲಾಗಿದೆ. ಮುಳುಗಡೆ ಹೊಂದುವ ಜಮೀನುಗಳಿಗೆ ಏಕ ರೂಪ ದರ ನಿಗದಿಪಡಿಸುವ ನಿಟ್ಟಿನಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ.
26	ಎಐಬಿಪಿ (ಎನ್‌ಎಲ್‌ಬಿಸಿ-ಇಆರ್‌ಎಂ)	ಕೇಂದ್ರ ಸಹಾಯ ಧನ ಎ.ಐ.ಬಿ.ಪಿ ಅಡಿ ಅನುಮೋದಿತ ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ ಯೋಜನೆಯಡಿ ಈಗಾಗಲೇ ಮುಖ್ಯ/ಶಾಖಾ ಕಾಲುವೆ ಹಾಗೂ ವಿತರಣಾ ಕಾಲುವೆ ಜಾಲದ ಆಧುನೀಕರಣ ಪೂರ್ಣಗೊಂಡಿರುತ್ತದೆ. ಇದಲ್ಲದೇ, ಕಾಲುವೆ ಜಾಲದಡಿ ಸಮರ್ಪಕ ನೀರು ಹಂಚಿಕೆ ಹಾಗೂ ನಿರ್ವಹಣೆಗೆ ಆಧುನಿಕ ತಂತ್ರಜ್ಞಾನ ಅಳವಡಿಕೆಯ ಮೊದಲನೇ ಹಂತದ SCADA Based Canal Automation and GIS System ಕಾಮಗಾರಿಯು ಸಹ ಪೂರ್ಣಗೊಂಡಿದ್ದು ಕಾರ್ಯಾರಂಭಗೊಳಿಸಲಾಗಿದೆ. ಪ್ರಸ್ತುತ 2ನೇ ಹಂತದ SCADA Based Canal Automation and GIS System ಕಾಮಗಾರಿಗೆ ಟೆಂಡರ್ ಆಧಾರದ ಮೇಲೆ ಗುತ್ತಿಗೆವಹಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ.
27	ನಬಾರ್ಡ ಸಹಾಯಧನದಡಿ (ಕೊಂಗಂಡಿ ಏತ ನೀರಾವರಿ, ತಿಕೋಟಾ ಕೆರೆ & ಯರಗೋಳ & ಇತರೆ ಕೆರೆ ತುಂಬುವ ಯೋಜನೆ)	2017-18ನೇ ಸಾಲಿನಲ್ಲಿ ಯೋಜನೆ ಪೂರ್ಣಗೊಳಿಸಲಾಗಿದ್ದು ಉದ್ದೇಶಿತ ನೀರಾವರಿ ವಂಚಿತ ಕ್ಷೇತ್ರಕ್ಕೆ ನೀರಾವರಿ ಒದಗಿಸಲಾಗುತ್ತಿದೆ. ತಿಕೋಟ ಕೆರೆ ತುಂಬುವ ಯೋಜನೆ ಪೂರ್ಣಗೊಂಡಿದ್ದು ಕೆರೆಗಳಿಗೆ ನದಿ ಪಾತ್ರದಿಂದ ನೀರು ಲಿಫ್ಟ್ ಮಾಡಿ ತುಂಬಿಸಲಾಗುತ್ತಿದೆ. ಯರಗೋಳ & ಇತರ ಕೆರೆ ತುಂಬುವ ಯೋಜನೆಯಡಿ ಕೆರೆ ತುಂಬಿಸುವ ಟರ್ನ್ ಕೀ ಆಧಾರದ ಕಾಮಗಾರಿಯು ಹಂತದಲ್ಲಿದೆ.
28	DRIP ಆಲಮಟ್ಟಿ & ನಾರಾಯಣಪುರ ಆಣೆಕಟ್ಟುಗಳ ಪುನಶ್ಚೇತನ	ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟುಗಳ ಪುನಶ್ಚೇತನದ ಕಾಮಗಾರಿಗಳನ್ನು 8 ಪ್ಯಾಕೇಜ್‌ಗಳಡಿ ವಿಶ್ವ ಬ್ಯಾಂಕ್ ನೆರವಿನಡಿ ಕೈಗೆತ್ತಿಕೊಳ್ಳಲಾಗಿದ್ದು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ
30	ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) (ಸಂಖ ಲಿಫ್ಟ್ ಕೆರೆ ತುಂಬುವ ಯೋಜನೆ, ಜಟ್ಟೂರ ಬ್ರಿಡ್ಜ್ -ಕಂ- ಬ್ಯಾರೇಜ್ & ನಾಗರಬೆಟ್ಟ & ಯಳ್ಳಗುತ್ತಿ ಏತ ನೀರಾವರಿ ಯೋಜನೆ)	ಸಂಖ ಲಿಫ್ಟ್ ಕೆರೆ ತುಂಬುವ ಯೋಜನೆ ಪೂರ್ಣಗೊಂಡಿದ್ದು ಕೆರೆಗಳಿಗೆ ಭೀಮಾ ನದಿ ಪಾತ್ರದಿಂದ ನೀರು ಲಿಫ್ಟ್ ಮಾಡಿ ತುಂಬಿಸಲಾಗುತ್ತಿದೆ. ಕಾಗಿನ ನದಿಗೆ ಅಡ್ಡಲಾಗಿ ಜಟ್ಟೂರ ಬ್ರಿಡ್ಜ್ -ಕಂ- ಬ್ಯಾರೇಜ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ನಾಗರಬೆಟ್ಟ ಏತ ನೀರಾವರಿ ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗಳ ಅಂದಾಜು ಪತ್ರಿಕೆ ಅನುಮೋದನೆ ಹಂತದಲ್ಲಿದೆ. ಯಳ್ಳಗುತ್ತಿ ಏತ ನೀರಾವರಿ ಯೋಜನೆಯಡಿಯ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿಗಳ ಅಂದಾಜು ಪತ್ರಿಕೆ ಅನುಮೋದನೆ ಹಂತದಲ್ಲಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 69 ಪಿಪಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:23.03.2020

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ,
ಬೆಂಗಳೂರು.

ಚುಕ್ಕೆ ಗುರುತಿನ ಪ್ರಶ್ನೆ
★

@ Stard.
24/3/2020

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: **ಮಾನ್ಯ ವಿಧಾನ ಸಭೆಯ ಸದಸ್ಯರಾದ** ಶ್ರೀ ಬಂಡೆಪ್ಪ ಖಾಶೆಂಪುರ್ **ರವರ** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: **3020** ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಮಾನ್ಯ ವಿಧಾನ ಸಭೆಯ ಸದಸ್ಯರಾದ** ಶ್ರೀ ಬಂಡೆಪ್ಪ ಖಾಶೆಂಪುರ್ **ರವರ** ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ: 3020** ಕ್ಕೆ ಉತ್ತರಗಳ 350 ಪ್ರತಿಗಳನ್ನು ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

N. mangalagi

(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3020

ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)

ಉತ್ತರಿಸಬೇಕಾದ ದಿನಾಂಕ : 24-03-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿ

***

	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ರೈತರ ಪಂಪ್‌ಸೆಟ್ ಗಳಿಗೆ ವಿದ್ಯುತ್ ಒದಗಿಸುವ ಸಲುವಾಗಿ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು (ಟಿ.ಸಿ) ಅಳವಡಿಸಲಾಗಿದೆ;	ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯ ಬೀದರ್ ಜಿಲ್ಲೆಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಜನವರಿ 2020ರ ಅಂತ್ಯಕ್ಕೆ ಒಟ್ಟು **10,536** ಸಂಖ್ಯೆಯ ವಿವಿಧ ಸಾಮರ್ಥ್ಯದ ಪರಿವರ್ತಕಗಳನ್ನು ಅಳವಡಿಸಲಾಗಿರುತ್ತದೆ.
ಆ)	ರೈತರ ಪಂಪ್‌ಸೆಟ್‌ಗಳಿಗೆ ಟಿ.ಸಿ. ಅಳವಡಿಸಲು ಇರುವ ಮಾನದಂಡಗಳೇನು;	ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿರುವ ಅರ್ಜಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಹತ್ತಿರವಿರುವ ವಿದ್ಯುತ್ ಮಾರ್ಗದ ಲಭ್ಯತೆ ಮತ್ತು ಪರಿವರ್ತಕದ ಹೊರೆಯನ್ನು ಪರಿಶೀಲಿಸಿ ತಾಂತ್ರಿಕ ಸಾಧ್ಯತೆಗೆ ಅನುಗುಣವಾಗಿ ಅವಶ್ಯವಿದ್ದಲ್ಲಿ ಹೊಸದಾಗಿ ಪರಿವರ್ತಕವನ್ನು ಅಳವಡಿಸಿ, ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಅಳವಡಿಸಲಾಗಿರುವ ಪರಿವರ್ತಕಗಳು ಓವರ್ ಲೋಡ್ ಆಗಿದ್ದಲ್ಲಿ, ಅವುಗಳನ್ನು ಗುರುತಿಸಿ, ವಿಸ್ತರಣೆ ಮತ್ತು ವ್ಯವಸ್ಥೆ ಸುಧಾರಣೆಯಡಿ ಸದರಿ ಪರಿವರ್ತಕಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸಲು ಅಥವಾ ಹೆಚ್ಚುವರಿ ಪರಿವರ್ತಕ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೇ, ಗಂಗಾ ಕಲ್ಯಾಣ ಯೋಜನೆ, ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವ ಯೋಜನೆಗಳಡಿಯಲ್ಲಿಯೂ ಸಹ ಅವಶ್ಯಕತೆ ಇರುವ ಕಡೆ ಹೊಸದಾಗಿ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಲಾಗುತ್ತಿದೆ. ಹೊಸದಾಗಿ ನೋಂದಣಿಗೊಳ್ಳುವ ಅರ್ಜಿಗಳಿಗೆ ಪ್ರತಿ 2 ರಿಂದ 3 ಕೃಷಿ ಪಂಪ್‌ಸೆಟ್‌ಗಳಿಗೆ ಒಂದರಂತೆ 25 ಕೆವಿಎ ಸಾಮರ್ಥ್ಯದ ಪರಿವರ್ತಕವನ್ನು ಅಳವಡಿಸಿ, ಹಾಲಿ ಪರಿವರ್ತಕಗಳು ಓವರ್‌ಲೋಡ್ ಆಗುವುದನ್ನು ತಡೆಗಟ್ಟಲಾಗುತ್ತಿದೆ.
ಇ)	ರೈತರ ಪಂಪ್‌ಸೆಟ್‌ಗಳಿಗೆ ಅಳವಡಿಸಲಾಗಿರುವ ಟಿ.ಸಿ.ಗಳು ಆಗಿಂದಾಗ್ಗೆ ದುರಸ್ಥಿಗೆ ಬರುತ್ತಿದ್ದು, ಅವುಗಳನ್ನು ಸಕಾಲದಲ್ಲಿ ದುರಸ್ಥಿಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಅಳವಡಿಸಲಾಗಿರುವ ವಿತರಣಾ ಪರಿವರ್ತಕಗಳು ಈ ಕೆಳಕಂಡ ಕಾರಣಗಳಿಂದ ಓವರ್ ಲೋಡ್‌ನಿಂದಾಗಿ ವಿಫಲಗೊಳ್ಳುತ್ತಿವೆ:- • ರಾಜ್ಯದಲ್ಲಿ ಅಂತರ್ಜಲದ ಮಟ್ಟ ಕಡಿಮೆಯಿರುವ ಸ್ಥಳಗಳಲ್ಲಿ ರೈತರು ಮಂಜೂರಾದ ಹೊರೆಗಿಂತಲೂ ಹೆಚ್ಚಿನ ಸಾಮರ್ಥ್ಯದ ಮೋಟಾರು ಪಂಪುಗಳನ್ನು ಅಳವಡಿಸುತ್ತಿರುವುದರಿಂದ, • ಬೇಸಿಗೆ ಕಾಲದಲ್ಲಿ ಎಲ್ಲಾ ರೈತರು ತಮ್ಮ ಪಂಪ್ ಸೆಟ್‌ಗಳನ್ನು ಒಂದೇ ಸಮಯದಲ್ಲಿ ಚಾಲನೆಗೊಳಿಸುವುದರಿಂದ,
ಈ)	ಹಾಗಿದ್ದಲ್ಲಿ, ಸದರಿ ಟಿ.ಸಿ. ಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ದುರಸ್ಥಿಗೊಳಿಸಲು ಕೈಗೊಳ್ಳ ಬಹುದಾದ ಕ್ರಮಗಳೇನು;	

		• ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿರುವುದರಿಂದ, • ರೈತರು ಐ.ಎಸ್.ಐ. ಗುಣಮಟ್ಟದ ಮೋಟಾರ್‌ಗಳನ್ನು ಹಾಗೂ ಕೆಪಾಸಿಟರ್‌ಗಳನ್ನು ಅಳವಡಿಸದೇ ಇರುವುದರಿಂದ, • ಅವೈಜ್ಞಾನಿಕವಾಗಿ ಮೋಟಾರ್‌ಗಳನ್ನು ರೀ–ವೈಂಡಿಂಗ್ ಮಾಡಿಸಿರುವುದರಿಂದಲೂ ಕೂಡ ಪರಿವರ್ತಕಗಳು ವಿಫಲಗೊಳ್ಳುವ ಸಾಧ್ಯತೆ ಇರುತ್ತದೆ. ಬೀದರ್ ಜಿಲ್ಲೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಒಟ್ಟು 4 ಸಂಖ್ಯೆಯ ಪರಿವರ್ತಕ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಉಪ–ವಿಭಾಗ ಮಟ್ಟದಲ್ಲಿ 7 ಸಂಖ್ಯೆಯ ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದ್ದು, ಸರಾಸರಿ ವಿಫಲತೆ ಪ್ರಮಾಣಕ್ಕನುಗುಣವಾಗಿ ಪರಿವರ್ತಕಗಳನ್ನು ದಾಸ್ತಾನು ಇರಿಸಲಾಗಿದ್ದು, ರೈತರಿಗೆ ತೊಂದರೆಯಾಗದ ರೀತಿಯಲ್ಲಿ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಅಳವಡಿಸಲಾಗಿರುವ ಪರಿವರ್ತಕಗಳು ವಿಫಲಗೊಂಡಲ್ಲಿ 72 ಗಂಟೆಯೊಳಗಾಗಿ ಜೇಷ್ಠತೆ ಮತ್ತು ಲಭ್ಯತೆ ಆಧಾರದ ಮೇಲೆ ಬದಲಾಯಿಸಲಾಗುತ್ತಿದೆ.
ಉ)	ರೈತರ ಪಂಪ್‌ಸೆಟ್‌ಗಳ ಸಂಖ್ಯೆ ಹೆಚ್ಚಳಕ್ಕೆ ಅನುಗುಣವಾಗಿ ಟಿ.ಸಿ.ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ರೈತರ ಪಂಪ್‌ಸೆಟ್‌ಗಳ ಸಾಮರ್ಥ್ಯಕ್ಕನುಗುಣವಾಗಿ ಸೂಕ್ತ ಸಾಮರ್ಥ್ಯದ ಪರಿವರ್ತಕಗಳನ್ನು ಅಳವಡಿಸಿ, ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಪಂಪ್‌ಸೆಟ್‌ಗಳ ಒಟ್ಟಾರೆ ಸಾಮರ್ಥ್ಯಕ್ಕನುಗುಣವಾಗಿ ವಿದ್ಯುತ್ ಹೊರೆಯನ್ನು ನಿಭಾಯಿಸುವಷ್ಟು ಸಾಮರ್ಥ್ಯದ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ.
ಊ)	ಹಾಗಿದ್ದಲ್ಲಿ, ಪಂಪ್‌ಸೆಟ್‌ಗಳ ಅನುಪಾತಕ್ಕೆ ಅನುಗುಣವಾಗಿ ಟಿ.ಸಿ.ಗಳನ್ನು ಅಳವಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು.	ಒಂದು ವೇಳೆ ಅಳವಡಿಸಿರುವ ಪರಿವರ್ತಕಗಳು ಪಂಪ್‌ಸೆಟ್‌ಗಳ ಅನಧಿಕೃತ ಹೆಚ್ಚುವರಿ ವಿದ್ಯುತ್ ಹೊರೆಯಿಂದ ಮತ್ತು ತಾಂತ್ರಿಕ ಕಾರಣಗಳಿಂದ ವಿಫಲಗೊಂಡಲ್ಲಿ, ಅಧಿಕ ಹೊರೆಯನ್ನು ಪೂರೈಸಲು ಹೆಚ್ಚಿನ ಸಂಖ್ಯೆಯ ಪರಿವರ್ತಕ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

ಸಂಖ್ಯೆ: ಎನರ್ಜಿ 69 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 66 ವಿಸವಿಪ್ರ - 20

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 23.03-20

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್ತು~~,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ಸುರೇಶ್ ಗೌಡ. ರವರ ಚುಕ್ಕೆ ಗುರುತಿನ ~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ: 860 ಕ್ಕೆ ಉತ್ತರಗಳನ್ನು ಸಲ್ಲಿಸುವ ಬಗ್ಗೆ.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ಸುರೇಶ್ ಗೌಡ. ರವರ ಚುಕ್ಕೆ ಗುರುತಿನ / ~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ: 860 ಕ್ಕೆ ಜಲಸಂಪನ್ಮೂಲ ಇಲಾಖೆಯು ನೀಡಿರುವ ಉತ್ತರದ 350 ಪ್ರತಿಗಳನ್ನು ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

(ಸಹಿ)
ಶಾಖಾಧಿಕಾರಿ (ಪ್ರ)
ಜಲಸಂಪನ್ಮೂಲ ಇಲಾಖೆ (ಎಂಎಂಐ-2)

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿಗಳು(ಎಂಎಂಐ-2), ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 860
2. ಸದಸ್ಯರ ಹೆಸರು : ಶ್ರೀ ಸುರೇಶ್ ಗೌಡ
3. ಉತ್ತರಿಸಬೇಕಾದ ದಿನಾಂಕ : 24-03-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹಾಸನ ಮತ್ತು ಮಂಡ್ಯ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಎಡದಂಡೆ ನಾಲೆ ಆಧುನೀಕರಣಕ್ಕಾಗಿ ಯಾವ ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ;	ಮೊದಲನೇ ಹಂತದಲ್ಲಿ ಹೇಮಾವತಿ ಎಡದಂಡೆ ನಾಲೆಯ ಆಧುನೀಕರಣದ ಮೊದಲನೇ ಹಂತದಲ್ಲಿ ಸರಪಳಿ 0.00 ಕಿ.ಮೀ. ನಿಂದ 72.267 ಕಿ.ಮೀ. ವರೆಗೆ ಮತ್ತು ಬಾಗೂರು ನವಿಲೆ ಸುರಂಗದ ಆಗಮನದ ಕಾಲುವೆ ಸರಪಳಿ 0.00 ಕಿ.ಮೀ. ನಿಂದ 5.575 ಕಿ.ಮೀ. ವರೆಗಿನ ನಾಲಾ ಆಧುನೀಕರಣ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಶ್ರೀ ಎಂ.ವೈ. ಕಟ್ಟೀಮನಿ ರವರಿಗೆ ವಹಿಸಲಾಗಿದೆ. ಎರಡನೇ ಹಂತದಲ್ಲಿ ಹೇಮಾವತಿ ಎಡದಂಡೆ ನಾಲೆಯ ಸರಪಳಿ:72.267 ಕಿ.ಮೀ. ನಿಂದ 214.30 ಕಿ.ಮೀ. ವರೆಗಿನ ನಾಲಾ ಆಧುನೀಕರಣ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಶ್ರೀ ಎಂ.ವೈ. ಕಟ್ಟೀಮನಿ ರವರಿಗೆ ವಹಿಸಲಾಗಿದೆ.
ಆ	ಸದರಿ ಗುತ್ತಿಗೆದಾರರು ಕರಾರು ರೀತ್ಯಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಾರೆಯೆ ಹಾಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ;	ಮೊದಲನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಒಟ್ಟಾರೆ ವೆಚ್ಚವು ರೂ.762.42 ಕೋಟಿಗಳು ಆಗಿರುತ್ತದೆ. ಎರಡನೇ ಹಂತದ ಕಾಮಗಾರಿಯನ್ನು ಭೌತಿಕವಾಗಿ ಪೂರ್ಣಗೊಳಿಸಿದ್ದು, ಒಟ್ಟಾರೆ ವೆಚ್ಚವು ರೂ.980.20 ಕೋಟಿಗಳು ಆಗಿರುತ್ತದೆ.
ಇ	ಸದರಿ ಗುತ್ತಿಗೆದಾರರು ಇನ್ನು ಎಷ್ಟು ಕಾಮಗಾರಿಗಳನ್ನು ಬಾಕಿ ಉಳಿಸಿಕೊಂಡಿರುತ್ತಾರೆ ;	ಗುತ್ತಿಗೆ ಕರಾರಿನ ಅನ್ವಯ ವಹಿಸಲಾದ ಕಾಮಗಾರಿಗಳು ಪೂರ್ಣಗೊಳಿಸಿದ್ದು ಬಾಕಿ ಇರುವುದಿಲ್ಲ.
ಈ	ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ತರುವಾಯ ಈ ಕಾಮಗಾರಿಗಳ ಕುರಿತು ತನಿಖೆಗೆ ಆದೇಶಿಸಿರುವುದು ನಿಜವೇ ? (ವಿವರ ನೀಡುವುದು)	ಸದರಿ ಕಾಮಗಾರಿಗಳ ಬಗ್ಗೆ ಯಾವುದೇ ತನಿಖೆಯನ್ನು ಆದೇಶಿಸಿರುವುದಿಲ್ಲ.

ಸಂಖ್ಯೆ:ಜಸಂಇ 66 ಎನ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 45 ಡಬ್ಲ್ಯೂಎಲ್‌ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:23.03.2020.

12
Stard
24/03/2020

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು-560001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2912ಗೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2912/2020, ದಿ:11.03.2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2912ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್)
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ-4)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2912
2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)
3. ಉತ್ತರಿಸಬೇಕಾದ ದಿನಾಂಕ : 24.03.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಹುಕ್ಕೇರಿ ತಾಲ್ಲೂಕಿನಲ್ಲಿ ಬರುವ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸಂಕೇಶ್ವರ, ಗೋಟೂರ, ಹೆಬ್ಬಾಳ, ಕೋಚರಿ, ಬಡಕುಂದ್ರಿ ಮತ್ತು ಯರನಾಳ ಬ್ಯಾರೇಜ್‌ಗಳಿಗೆ ಸುಲ್ತಾನಪೂರ ಬ್ಯಾರೇಜ್‌ನಿಂದ ನೀರು ತುಂಬಿಸುವ ಯೋಜನೆಯನ್ನು ರೂಪಿಸಲಾಗಿದೆಯೇ;	ಪ್ರಸ್ತುತ ಜನಪ್ರತಿನಿಧಿಗಳ ಬೇಡಿಕೆಯಂತೆ ಸಂಕೇಶ್ವರ, ಗೋಟೂರ, ಹೆಬ್ಬಾಳ, ಕೋಚರಿ, ಬಡಕುಂದ್ರಿ ಮತ್ತು ಯರನಾಳ ಬ್ಯಾರೇಜುಗಳಿಗೆ ಬೇಸಿಗೆ ಕಾಲದಲ್ಲಿ ಸುಲ್ತಾನಪುರ ಬ್ಯಾರೇಜ್ ಹತ್ತಿರದಿಂದ ಒಂದು ಬಾರಿ ನೀರು ತುಂಬಿಸುವ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ. ಪ್ರಸ್ತುತ ಈ ಯೋಜನೆಗೆ 0.15 ಟಿ.ಎಮ್.ಸಿ. ನೀರಿನ ಅವಶ್ಯಕತೆ ಇರುತ್ತದೆ. ಇದಕ್ಕೆ ಘಟಪ್ರಭಾ ಜಲಾಶಯದ ನೀರನ್ನು ಬಳಸುವ ಅವಶ್ಯಕತೆಯಿರುವುದರಿಂದ ನೀರಿನ ಹಂಚಿಕೆ ಬಗ್ಗೆಯೂ ಪರಿಶೀಲಿಸಬೇಕಿದೆ.
ಆ)	ಹಾಗಿದ್ದಲ್ಲಿ, ಸದರಿ ಯೋಜನೆಯು ಯಾವ ಹಂತದಲ್ಲಿದೆ; (ಯೋಜನೆಯ ಸಂಪೂರ್ಣ ವಿವರಗಳನ್ನು ನೀಡುವುದು)	
ಇ)	ಸದರಿ 6 ಬ್ಯಾರೇಜ್‌ಗಳಿಗೆ ನೀರು ತುಂಬುವ ಯೋಜನೆಯ ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳೇನು ಹಾಗೂ ಇದರ ಕಾಲಮಿತಿಯೇನು?	ಸಂಕೇಶ್ವರ, ಗೋಟೂರ, ಹೆಬ್ಬಾಳ, ಕೋಚರಿ, ಬಡಕುಂದ್ರಿ, ಯರನಾಳ ಮತ್ತು ಸುಲ್ತಾನಪುರ ಬ್ಯಾರೇಜು ಗಳಿಗೆ ಬೇಸಿಗೆ ಕಾಲದಲ್ಲಿ ನೀರು ತುಂಬಿಸುವ ಯೋಜನೆಯನ್ನು ತಾಂತ್ರಿಕವಾಗಿ ಪರಿಶೀಲಿಸಿ ಸಾಧಕ ಬಾಧಕಗಳನ್ನೊಳಗೊಂಡ ಯೋಜನಾ ವರದಿಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಜಸಂಇ 45 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 57 ಎಂಎಲ್‌ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 23.03.2020.

ಇಂದ:

ಸರ್ಕಾರದ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

14
Stored
24/3/2020

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ), ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2799ರ ಬಗ್ಗೆ.

****

ಮಾನ್ಯವಿಧಾನಸಭಾ ಸದಸ್ಯರಾದ ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ), ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2799 ಕ್ಕೆ ದಿನಾಂಕ: 24.03.2020 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,
Shubha K. 23/03/2020
(ಶುಭಾ ಕೆ.),
ತಾಂತ್ರಿಕ ಸಹಾಯಕರು (ತಾಂತ್ರಿಕ-6),
ಜಲಸಂಪನ್ಮೂಲ ಇಲಾಖೆ.

ಪ್ರತಿಯನ್ನು:

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
4. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ, ಕೃಭಾಜನಿ/ ಸೇವೆಗಳು, ಇವರ ಆಪ್ತ ಸಹಾಯಕರು, ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ), ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2799
ಸದಸ್ಯರ ಹೆಸರು: ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ)
ಉತ್ತರಿಸಬೇಕಾದ ದಿನಾಂಕ: 24.03.2020
ಉತ್ತರಿಸುವ ಸಚಿವರು: ಜಲಸಂಪನ್ಮೂಲ ಸಚಿವರು

ಕ್ರಮ ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದ ವಿವಿಧ ನೀರಾವರಿ ನಿಗಮಗಳು ವಿದ್ಯುತ್ ಬಿಲ್ಲುಗಳನ್ನು ಪಾವತಿಸಲು ಪ್ರತ್ಯೇಕವಾಗಿ ಅನುದಾನವನ್ನು ಮೀಸಲಿರಿಸಲಾಗಿದೆಯೇ; (ನಿಗಮವಾರು, ವರ್ಷವಾರು ವಿವರ ನೀಡುವುದು)	ಜಲಸಂಪನ್ಮೂಲ ಇಲಾಖೆಯಡಿಯಲ್ಲಿನ ನಿಗಮಗಳಲ್ಲಿ ವಿದ್ಯುತ್ ಬಿಲ್ಲಗಳನ್ನು ಪಾವತಿಸಲು ಪ್ರತ್ಯೇಕವಾಗಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆಧರೆ, ನಿಗಮಕ್ಕೆ ಲಭ್ಯವಾಗುವ ಅನುದಾನದಲ್ಲಿಯೇ ಆದ್ಯತೆಯ ಮೇಲೆ ಭರಿಸುವ ಅವಕಾಶ ಇರುತ್ತದೆ.
ಆ.	ಕಾವೇರಿ ನೀರಾವರಿ ನಿಗಮವು ಎಷ್ಟು ಮೊತ್ತದ ವಿದ್ಯುತ್ ಬಿಲ್ಲು ಬಾಕಿಯನ್ನು ಉಳಿಸಿಕೊಂಡಿದೆ (ವಿವರ ಒದಗಿಸುವುದು)	ಕಾವೇರಿ ನೀರಾವರಿ ನಿಗಮದಲ್ಲಿ ಒಟ್ಟಾರೆ ರೂ.10852.03 ಲಕ್ಷಗಳ ಮೊತ್ತದ ವಿದ್ಯುತ್ ಬಿಲ್ಲುಗಳು ಬಾಕಿ ಇರುವುದು ಕಂಡು ಬಂದಿದ್ದು, ಇವುಗಳನ್ನು ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.
ಇ.	ವಿದ್ಯುತ್ ಬಿಲ್ಲು ಪಾವತಿಸದಿರುವುದರಿಂದ ಕೆರೆ ತುಂಬಿಸುವ ಯೋಜನೆಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಲಸಂಪನ್ಮೂಲ ಇಲಾಖೆಯಡಿಯಲ್ಲಿ ವಿದ್ಯುತ್ ಬಿಲ್ಲು ಪಾವತಿಸದಿರುವುದರಿಂದ ಯಾವುದೇ ಕೆರೆ ತುಂಬಿಸುವ ಯೋಜನೆಗಳು ಅರ್ಧಕ್ಕೆ ನಿಂತಿರುವುದು ಕಂಡುಬಂದಿರುವುದಿಲ್ಲ.
ಈ.	ಬಂದಿದ್ದಲ್ಲಿ, ಬಾಕಿ ಇರುವ ವಿದ್ಯುತ್ ಬಿಲ್ಲನ್ನು ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ನಿಗಮಕ್ಕೆ ಹಂಚಿಕೆಯಾಗುವ ಅನುದಾನದ ಅನುಸಾರ ಪಾವತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಜಸಂಇ 57 ಎಂಎಲ್‌ಎ 2020

(ರಮೇಶ್ ಲ ಜಾರಕಿಹೊಳಿ),
ಜಲಸಂಪನ್ಮೂಲ ಸಚಿವರು.